ಹುಬ್ಬಳ್ಳಿ ಕೆ. ಎಂ. ಸಿ. ಆಸ್ಪತ್ರೆಯ ಬಗ್ಗೆ.

೧೧೮೧. ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).——ಮಾನ್ಯ ಆರೋಗ್ಯ ಮಂತ್ರಿ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿಯ ಕೆ. ಎಂ. ಸಿ. ಆಸ್ಪತ್ರೆಯಲ್ಲಿರುವ ಹಾಸಿಗೆಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಆಸ್ಪತ್ರೆಯ ವಿಭಾಗದಲ್ಲಿ ಸದ್ಯ ಕೆಲಸ ಮಾಡುತ್ತಿರುವ ವೈದ್ಯರುಗಳು ಎಷ್ಟು ? (ಪುರುಷರು ಮತ್ತು ಸ್ತ್ರೀ ವೈದ್ಯರು)

ಇ) ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶುಶ್ರೂಷಕರ ಸಂಖ್ಯೆ ಎಷ್ಟು ? (ಪುರುಷ ಮಂತ್ರಿ ಸ್ತ್ರೀ ವೈದ್ಯರು)

ಈ) ಮೂರನೇ ಮತ್ತು ನಾಲ್ಕನೇ ದರ್ಜೆ ನೌಕರರ ಸಂಖ್ಯೆ ಎಷ್ಟು ?

ಉ) ಆಸ್ಪತ್ರೆಗೆ ಸಂದರ್ಶನ ನೀಡುತ್ತಿರುವ ಗೌರವ ವೈದ್ಯರುಗಳ ಸಂಖ್ಯೆ ಎಷ್ಟು ?

ಊ) ದಿನಂಪ್ರತಿ ಚಿಕಿತ್ಸೆ ಪಡೆಯುವವರ ಹೊರ ರೋಗಿಗಳ ಸಂಖ್ಯೆ ಎಷ್ಟು ?

ಋ) ೧೯೮೧ ರಿಂದ ಈವರೆಗೆ ದಾಖಲಾದ ನಂತರ ಆಸ್ಪತ್ರೆಯಲ್ಲಿ ಸತ್ತ ರೋಗಿಗಳ ಸಂಖ್ಯೆ ಎಷ್ಟು ?

ೠ) ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಕಿರಿಯ ವೈದ್ಯರುಗಳ ಸಂಖ್ಯೆ ಎಷ್ಟು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಸಚಿವರು).—

ಅ) ೭೯೦.

ಆ) ೨೧ ವೈದ್ಯರು ೧೨ ಮಹಿಳಾ ವೈದ್ಯರು (ಇವರಲ್ಲದೆ ೪೧ ಮಂದಿ ಪ್ರಾಧ್ಯಾಪಕರು ೨೯ ಸಹ ಪ್ರಾಧ್ಯಾಪಕರು ಮತ್ತು ಕೆಳ ಮಂದಿ ಉಪನ್ಯಾಸಕರೂ ಕೆಲಸ ಮಾಡುತ್ತಿದ್ದಾರೆ)

ಇ) ಶುಶ್ರೂಷಕರು (ಪುರುಷ) ೭

ಶುಶ್ರೂಷಕರು (ಮಹಿಳಾ) ೧೧೪ (ಇವರಾರು ವೈದ್ಯರಲ್ಲ)

ಈ) ಮೂರನೇ ದರ್ಜೆ ನೌಕರರು ೭೨

ನಾಲ್ಕನೇ ದರ್ಜೆ ನೌಕರರು ೩೫೫ (ಇದರಲ್ಲಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ೧೨೪ ಜನ ಮೂರನೇ ದರ್ಜೆಯ ನೌಕರರಂ ಮತ್ತು ೧೭೧ ಜನ ನಾಲ್ಕನೆ ದರ್ಜೆಯವರು ಕೆಲಸ ಮಾಡುತ್ತಿದ್ದಾರೆ)

ಉ) ಯಾರೂ ಇಲ್ಲ,

ಊ) ಹೊರ ರೋಗಿಗಳ ಸರಾಸರಿ ಸಂಖ್ಯೆ ೮೮೯.

ಋ) ದಾಖಲಾದ ೧, ೩೨,೫೧೭ ರೋಗಿಗಳಲ್ಲಿ ೬೫೧೪ ರೋಗಿಗಳು ಸತ್ತರು.

ೠ) ೭೯.

ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಬಗ್ಗೆ,

೧೨೮೨. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು (ಸರ್ಕಾರಿ, ಖಾಸಗಿ ಹಾಗೂ ಅನುದಾನ ಪಡೆಯುವ ಕಾಲೇಜುಗಳ ಸಂಖ್ಯೆಯನ್ನು ಪ್ರತ್ಯೇಕವಾಗಿ ಒದಗಿಸುವುದು)

ಆ) ಸದರಿ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ಕಾಲೇಜುವಾರು ಮಾಹಿತಿ ಒದಗಿಸುವುದು)